

## ಬಲು ಅಪರೂಪ ಕಲ್ಲಿನ ಗದೆ

ಒಂದು ಚಿಕ್ಕ ಉಳಿ ದೊಡ್ಡ ಬಂಡೆಯನ್ನು ಕೆತ್ತಿ ಸುಂದರ ರೂಪ ನೀಡುತ್ತದೆ. ಈ ಚಿತ್ರದಲ್ಲಿ ಕಾಣುತ್ತಿರುವ ವಿಶಿಷ್ಟವಾದ ಶಿಲಾ ಗದೆ ಕುಸುರಿ ಕೆಲಸದಿಂದ ನೋಡಲು ವಿಭಿನ್ನವಾಗಿದ್ದು, ಅಷ್ಟೇ ಆಕರ್ಷಣೀಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಈಶ್ವರಮಂಗಲದ ಪಂಚಮುಖಿ ಆಂಜನೇಯ ಸ್ವಾಮಿಯ ಕೋದಂಡರಾಮ ಎದುರು ಭಾಗದಲ್ಲಿ ಬೃಹದಾಕಾರದ ಕಲ್ಲಿನಲ್ಲಿ ಕೆತ್ತಿದ ಆಕರ್ಷಕ ಕೆತ್ತನೆಯ ಗದಾಯುಧ ಇದೆ. ಇದನ್ನು ಅಪರೂಪವೆಂದೇ ಹೇಳಬಹುದು. ಪ್ರವಾಸಿಗರ ಆಕರ್ಷಣೆಯ ಕೇಂದ್ರಬಿಂದುವೂ ಆಗಿರುವ ಈ ಕಲ್ಲಿನ ಗದೆಯು, ಕಲಾವಿಧಾನ ಕಲಾ ನೈಪುಣ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ. ಇಷ್ಟು ದೊಡ್ಡ ಗಾತ್ರದ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ...!

—ನಂದನ್ ಕುಮಾರ್ ಪೆರ್ನಾಜೆ, ಪುತ್ತೂರು

## ಕೊಪ್ಪಳದಲ್ಲಿ ಚಿಕ್ಕ ತಿರುಪತಿ

ತಿರುಪತಿ ಎಂದಾಕ್ಷಣ ನೆನಪಾಗುವುದು ಆಂಧ್ರ ಪ್ರದೇಶದಲ್ಲಿರುವ ಪ್ರಸಿದ್ಧ ತಿರುಪತಿ ದೇವಾಲಯ. ಅಲ್ಲಿನ ದೇವರ ಮೂರ್ತಿಯನ್ನೇ ಹೋಲುವ ಮೂರ್ತಿಯೊಂದು ರಾಜ್ಯದಲ್ಲೂ ಇದೆ. ಅದನ್ನು 'ಚಿಕ್ಕ ತಿರುಪತಿ' ಎಂದು ಕರೆಯಬಹುದು. ಬಹುತೇಕರಿಗೆ ಇದು ಗೊತ್ತಿಲ್ಲದ ವಿಚಾರ. ಹೌದು, ಕೊಪ್ಪಳದ ಇಂದರಗಿ ಎಂಬ ಗ್ರಾಮವು ಸುತ್ತಲೂ ಬೆಟ್ಟಗುಡ್ಡಗಳಿಂದ ಆವರಿಸಿದೆ. ಆ ಗ್ರಾಮದ ಹೊರವಲಯದಲ್ಲಿರುವ ನಿಸರ್ಗದತ್ತ ಕಲ್ಲುಗುಂಡಿನ ಅಡಿಯಲ್ಲಿ ಕನಕರಾಯ ದೇವರ ಒಂದು ದೇವಸ್ಥಾನವಿದೆ. ಪುರಾತನ ಕಾಲದಲ್ಲಿಯೇ ಆ ದೇಗುಲವನ್ನು ನಿರ್ಮಿಸಲಾಗಿದೆ. ಅದರಲ್ಲಿ ಕನಕರಾಯ ದೇವರ ಮೂರ್ತಿಯಿದ್ದು, ಅದು ತಿರುಪತಿಯ ತಿಮ್ಮಪ್ಪನ ಮೂರ್ತಿಯನ್ನೇ ಹೋಲುತ್ತದೆ. ಆದ್ದರಿಂದ ಈ ದೇವರನ್ನು ಹಾಗೂ ದೇಗುಲವನ್ನು ಈ ಭಾಗದ ಬಹುತೇಕ ಜನರು ರೂಢಿಗತವಾಗಿ 'ಚಿಕ್ಕ ತಿರುಪತಿ' ಎಂದೇ ಕರೆಯುತ್ತಾರೆ. ಮೂಲ ಇದು ಕನಕರಾಯ ದೇವರಾಗಿದ್ದರೂ ಹೋಲಿಕೆಯ ಆಧಾರದ ಮೇಲೆ ಇದು 'ಚಿಕ್ಕ ತಿರುಪತಿ' ಎಂದೇ ಪ್ರಸಿದ್ಧವಾಗಿದೆ.

—ಸೋಮಲಿಂಗಪ್ಪ ಬೆಣ್ಣೆ ಗುಳದಳ್ಳಿ, ಕೊಪ್ಪಳ





## ಪ್ರಕೃತಿ ಮಡಿಲಲ್ಲಿ ದೇಗುಲ

ಈ ಚಿತ್ರದಲ್ಲಿ ಕಾಣುತ್ತಿರುವ ಜೋಡಿಗಳು ಇರುವುದು ಶಿವಮೊಗ್ಗದ ಸಾಗರ ತಾಲ್ಲೂಕಿನ ನಾಡಕಲಸೆ ಗ್ರಾಮದ ದಟ್ಟ ಕಾಡಿನ ಮಧ್ಯೆ. ನೋಡಲು ಇವು ಪ್ರಕೃತಿ ಮಡಿಲಲ್ಲಿ ಸುಂದರವಾಗಿ ಕಾಣುತ್ತವೆ. ಹೊಯ್ಸಳ ರಾಜವಂಶದ ಚಿಹ್ನೆಯನ್ನು (ಸಳ ಹುಲಿಯನ್ನು ಕೊಲ್ಲುವ ಕೆತ್ತನೆ) ಈ ದೇವಾಲಯದ ಗೋಡೆಗಳ ಮೇಲೆ ಸ್ಪಷ್ಟವಾಗಿ ಕಾಣಬಹುದು. ಬೇಲೂರು, ಹಳೇಬೀಡು ದೇವಾಲಯಗಳ ರೂಪವನ್ನು ಹೋಲುವ ಈ ಜೋಡಿ ದೇವಸ್ಥಾನಗಳು ರಾಜ್ಯ ಸರ್ಕಾರದ ಕಣ್ಣಿಗೆ ಬಿದ್ದಂತಿಲ್ಲ. ಬಿದ್ದಿದ್ದರೂ ಅಭಿವೃದ್ಧಿಗೊಳಿಸದೇ ನಿರ್ಲಕ್ಷ್ಯದ ಕೂಪಕ್ಕೆ ದೂಡಿದಂತಿರುವುದು ವಿಷಾದನೀಯ.

—ಮೋಹನ ಮರಸ, ಸಾಗರ

